






■ ಡಾ. ಗುರಲಿಂಗಪ್ಪ ಅಂಕದ

ಸಂತೋಷವಾದಾಗ, ದು:ಖವಾದಾಗ ಕೆಲವರು ಆಕಾಶದತ್ತ ನೋಡುವುದನ್ನು ಕಂಡಿದ್ದೇವೆ. ಆದರೆ ಕವಿ, ಚಿತ್ರಕಲಾವಿದ ಹಾಗೂ ಚಲನಚಿತ್ರ ನಿರ್ದೇಶಕರು ಕೇವಲ ಆಕಾಶ ನೋಡದೆ, ಆಕಾಶದ ಮೋಡ, ಸೂರ್ಯಚಂದ್ರ, ನಕ್ಷತ್ರಗಳನ್ನೂ ನೋಡುತ್ತಾರೆ. ಇವುಗಳನ್ನು ಬಳಸಿಕೊಂಡೇ ಕವಿ ಕವಿತೆ ಬರೆದರೆ, ಚಿತ್ರ ಕಲಾವಿದ ಆಕಾಶವನ್ನೇ ಕ್ಯಾನ್ವಾಸ್ ಮಾಡಿ ಮೋಡಗಳಂತಹ ಬಣ್ಣಗಳಿಂದ ಚಿತ್ರ ರಚಿಸುತ್ತಾನೆ. ಚಲನಚಿತ್ರ ನಿರ್ದೇಶಕ ಚಿತ್ರಕ್ಕಾಗಿ ಸನ್ನಿವೇಶಗಳನ್ನು ಹುಡುಕುತ್ತಾನೆ. ಆದ್ದರಿಂದಲೇ ಮೋಡಗಳು ಇವರಿಗೆ ಇಷ್ಟದ ವಿಷಯಗಳು. ಈ ಮೋಡಗಳು ಸ್ಥಿರವಾಗಿ ಒಂದೇ ಕಡೆ ನಿಂತಿದ್ದರೆ ಇಷ್ಟೊಂದು ಮಹತ್ವ ಬರುತ್ತಿರಲಿಲ್ಲವೇನೋ! ಅವು ಗಾಳಿಯೊಂದಿಗೆ ಸದಾ ಚಲಿಸುತ್ತಿರುವುದರಿಂದ ಹಲವಾರು ರೂಪ, ಬಣ್ಣ ಮತ್ತು ಆಕಾರ ತಾಳುತ್ತವೆ. ಮುಂಗಾರು ದಿನಗಳಲ್ಲಂತೂ ಮೋಡಗಳ ವೈವಿಧ್ಯಕ್ಕೆ ಎಣೆಯೇ ಇಲ್ಲ.

ಸದಾ ಮೋಡ ಕವಿದ ಆಕಾಶಕ್ಕೆ ಜನರು ಶಾಪ ಹಾಕುವುದೂ ಇದೆ. ಬಟ್ಟೆ ಒಣಗಿಸಲೆಂದು ಟೆರೇಸ್ ಹತ್ತುವ ಮಹಿಳೆಯರು ಈ ವಿಷಯದಲ್ಲಿ ಮುಂದು. ಸೂರ್ಯಗ್ರಹಣ/ಚಂದ್ರಗ್ರಹಣ ನೋಡುವಾಗ, ಹುಣ್ಣಿಮೆ ಚಂದ್ರನನ್ನು ನೋಡುವಾಗ, ಸೂರ್ಯಾಸ್ತ ನೋಡಲೆಂದೇ ದೂರದ ಪ್ರವಾಸಿ ತಾಣಗಳಿಗೆ ಹೋದಾಗ ಅಥವಾ ಅತಿವೃಷ್ಟಿಯಾದಾಗ ಮೋಡಗಳನ್ನು ತೆಗಳುವುದು ಸಾಮಾನ್ಯ.

ಮೋಡಗಳನ್ನು ಹೊಗಳುವ ಪ್ರಸಂಗಗಳು ಹೇರಳವಾಗಿವೆ. ಮಳೆಗಾಗಿ ಕಾಯುತ್ತಿರುವ ರೈತ ಈ ವಿಷಯದಲ್ಲಿ ಮುಂಚೂಣಿಯಲ್ಲಿರುತ್ತಾನೆ. ನಮ್ಮ ನಿಮ್ಮಂಥ ಸೌಂದರ್ಯಪ್ರಿಯರೂ ಮೋಡಗಳನ್ನು ಹೊಗಳುವುದು ಸಾಮಾನ್ಯ.

ಕೆಲವರಂತೂ ಯಾವುದೋ ಕೆಲಸಕ್ಕೆಂದು ಹೊರಗಡೆ ಹೋಗುವಾಗ ಸ್ವಲ್ಪ ಮೋಡ ಕವಿದ ವಾತಾವರಣವಿದ್ದರೂ ಮೋಡಗಳ ಮೇಲೆಯೇ ತೆಗಳಿಕೆಯ ಸುರಿಮಳೆಗರೆಯುತ್ತಾರೆ. ಕೆಲವೊಮ್ಮೆ ಅದು ಕೇಳಿಸಿತೋ ಎಂಬಂತೆ, ಮೋಡಗಳು ಕೆಲವೇ ನಿಮಿಷಗಳಲ್ಲಿ ಮಂಗಮಾಯವಾಗುತ್ತವೆ!

ಛಾಯಾಗ್ರಾಹಕರಿಗೆ ಮೋಡಗಳೆಂದರೆ ಮೋಹ. ಅದೆಷ್ಟೊಂದು ಬಣ್ಣಗಳು, ರೂಪಗಳು ಆಕಾಶದಲ್ಲಿ. ಕವಿಕಲ್ಪನೆ ಗರಿಗೆದರಿದರೆ ಮೋಡಗಳಲ್ಲೂ ನೂರು ಅಕ್ಷೋಹಿಣಿ ಸೈನ್ಯಗಳೇ ಅವತರಿಸುತ್ತವೆ! ನನ್ನ ಗೆಳೆಯರು 'ಬರೀ ಬೆಟ್ಟ, ಗುಡ್ಡ, ಆಕಾಶದ್ದೇ ಫೋಟೋ ತೆಗೆಯುತ್ತೀ' ಎಂದು ಚುಡಾಯಿಸುತ್ತಿರುತ್ತಾರೆ. ಅದು ಅವರವರ ಭಾವಕ್ಕೆ ಬಿಟ್ಟದ್ದು. ಏಕೆಂದರೆ ಸೌಂದರ್ಯ ನೋಡುಗನ ಕಣ್ಣಲ್ಲಿರುತ್ತದೆ ಎಂಬುದು ಸುಳ್ಳಲ್ಲ. ಮಳೆಗಾಲದ ಆರಂಭದಲ್ಲಿ ಆಕಾಶವೆಂದರೆ ಛಾಯಾಗ್ರಾಹಕರ ಸ್ವರ್ಗ. ಈ ಮೋಡದ ಚಿತ್ರಗಳ ಸ್ಯಾಂಪಲ್‌ಗಷ್ಟೇ.